# ನಗರಸಭಾ ಕಾರ್ಯಾಲಯ, ದೊಡ್ಡಬಳ್ಳಾಪುರ

ನಸದೊ/ತಾಂತ್ರಿಕ ವಿಭಾಗ/ಟಿ.ಎನ್.02/2009-10 ದಿನಾಂಕ:15-10-2009

## -:: ಅಲ್ಪಾವಧಿ ಟೆಂಡರ್ ಪ್ರಕಟಣೆ ::-

ದೊಡ್ಡಬಳ್ಳಾಪುರ ನಗರಸಭಾ ವ್ಯಾಪ್ತಿಯಲ್ಲಿ 2009-10ನೇ ಸಾಲಿನ 12ನೇ ಹಣಕಾಸು ಯೋಜನೆಯ ಮುಕ್ತನಿಧಿ,ರಸ್ತೆ ಮತ್ತು ಸೇತುವೆ ದುರಸ್ಥಿ ನಿಧಿಯಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಿದ್ದು, ಇವುಗಳನ್ನು ನಿರ್ವಹಿಸುವಂತೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಮತ್ತು ನಗರಸಭೆ ದೊಡ್ಡಬಳ್ಳಾಪುರ ಕಛೇರಿಯಲ್ಲಿ ನೊಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರಿಂದ ಐಟಂವಾರು ಟೆಂಡರನ್ನು ದ್ವಿಪ್ರತಿಯಲ್ಲಿ ಕರೆಯಲಾಗಿದೆ. ಟೆಂಡರ್‌ದಾರರು ಭರ್ತಿ ಮಾಡಿದ ಟೆಂಡರ್ ಲಕೋಟೆಗಳನ್ನು ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ ಇವರ ಕಛೇರಿಯಲ್ಲಿ ದಿನಾಂಕ:30-10-2009 ಸಾಯಂಕಾಲ 4.00ಗಂಟೆಯೊಳಗೆ ಸ್ವೀಕರಿಸಲಾಗುವುದು. ಹಾಗೂ ಸಾಧ್ಯವಾದಲ್ಲಿ ಇದೇ ದಿನಾಂಕದಂದು ಟೆಂಡರ್‌ನ್ನು ತೆರೆಯಲಾಗುವುದು. ಅಥವಾ ಟೆಂಡರ್ ತೆರೆಯುವ ದಿನಾಂಕವನ್ನು ತಿಳಿಸಲಾಗುವುದು.

1. ಅರ್ಜಿ ಸಲ್ಲಿಸುವ ದಿನಾಂಕ:20-10-2009 ರಿಂದ 29-10-2009 ಸಾಯಂಕಾಲ 4.00 ಗಂಟೆವರೆಗೆ,
2. ಖಾಲಿ ಟೆಂಡರ್ ಫಾರಂ ನೀಡುವ ದಿನಾಂಕ:22-10-2009 ರಿಂದ 30-10-2009 ಸಾಯಂಕಾಲ 5.00ಗಂಟೆವರೆಗೆ ಕೆಳಗಿನ ಕಾಮಗಾರಿಗಳನ್ನು ನಿರ್ವಹಿಸಲು ನೀಡಿರುವ ಕಾಲಾವಧಿ: 90ದಿನಗಳು,

| ಕ್ರ. ಸಂ | ಕಾಮಗಾರಿಯ ಹೆಸರು | ಟೆಂಡರ್ ಗಿಟ್ಟ ಮೊತ್ತ (ಲಕ್ಷಗಳಲ್ಲಿ) | ಇಎಂಡಿ ಮೊತ್ತ (ರೂ.ಗಳಲ್ಲಿ) | ಟೆಂಡರ್ ಫಾರಂ ಬೆಲೆ (ರೂ.ಗಳಲ್ಲಿ) |
|---|---|---|---|---|
| **ರಸ್ತೆ ಮತ್ತು ಸೇತುವೆ ದುರಸ್ಥಿ ನಿಧಿಯಡಿಯಲ್ಲಿನ ಕಾಮಗಾರಿಗಳು** | | | | |
| 1 | ವಾರ್ಡ್ ನಂ.28ರ ಕನ್ನಡ ಜಾಗೃತ ಪರಿಷತ್ ಮುಂಭಾಗ ಸೋಮೇಶ್ವರ ಬಡಾವಣೆಯ ರಸ್ತೆಯಲ್ಲಿ ಡೆಕ್ ಸ್ಲ್ಯಾಬ್ ಕಲ್ವರ್ಟ್ ಮಾಡುವ ಕೆಲಸ. | 2.50 | 6250 | 500+ತೆರಿಗೆ |
| 2 | ವಾರ್ಡ್ ನಂ.04ರ ಕೋರ್ಟ್ ರಸ್ತೆಯಲ್ಲಿರುವ ಕಲ್ಯಾಣಿ ಪಕ್ಕದ ರಸ್ತೆಯಲ್ಲಿ ಮತ್ತು ವಾರ್ಡ್ ನಂ.19ರ ಅ.ನ.ಕೃ ರಸ್ತೆಯಲ್ಲಿರುವ ಅರಸಪ್ಪ ಮನೆಯ ಹತ್ತಿರ ಡೆಕ್ ಸ್ಲ್ಯಾಬ್ ಕಲ್ವರ್ಟ್ ಕೆಲಸ. | 1.50 | 3750 | 500+ತೆರಿಗೆ |
| 3 | ವಾರ್ಡ್ ನಂ.27ರ ಮಸೀದಿಯಿಂದ ಲಕ್ಷ್ಮಯ್ಯ ಮನೆವರೆಗೆ ಹಾಗೂ ಕೋರ್ಟ್ ಮುಖ್ಯರಸ್ತೆಯಲ್ಲಿ ಕಾಂಕ್ರೀಟ್ ಚರಂಡಿ ನಿರ್ಮಾಣ | 2.00 | 5000 | 500+ತೆರಿಗೆ |
| 4 | ವಾರ್ಡ್ ನಂ.13ರ ಭುವನೇಶ್ವರಿನಗರ ಹೋಟೆಲ್ ರಂಗಪ್ಪನವರ ಮನೆ ಪಕ್ಕ, ದೇವಸ್ಥಾನದ ರಸ್ತೆಗೆ ಮತ್ತು ವಾರ್ಡ್ ನಂ.13ರ ಚಕ್ರದಿಮ್ಮನಕೋಟೆ ಶ್ರೀಧರಪ್ಪನವರ ಮನೆ ಹತ್ತಿರ ಡೆಕ್ ಸ್ಲ್ಯಾಬ್ ಮಾಡುವ ಕೆಲಸ. | 1.00 | 2500 | 500+ತೆರಿಗೆ |
| 5 | ವಾರ್ಡ್ ನಂ.19ರ ಅಂಗಡಿ ಮುನಿಯಪ್ಪನವರ ಮನೆಯಿಂದ | 1.00 | 2500 | 500+ತೆರಿಗೆ |

| | | | | |
|---|---|---|---|---|
| | ಕಾಂಕ್ರೀಟ್ ಚರಂಡಿ ಕೆಲಸ, | | | |
| **ಮುಕ್ತ ನಿಧಿಯಡಿಯಲ್ಲಿನ ಕಾಮಗಾರಿಗಳು** | | | | |
| 6 | ನಗರಸಭಾ ಕಾರ್ಯಾಲಯದ ಆವರಣದಲ್ಲಿ ತಾಂತ್ರಿಕ ಶಾಖೆಗೆ ನೂತನ ಕಟ್ಟಡ ನಿರ್ಮಾಣ ಕಾಮಗಾರಿ | 10.00 | 25000 | 500+ತೆರಿಗೆ |

<u>**ಷರತ್ತುಗಳು:–**</u>

1. ಖಾಲಿ ಟೆಂಡರ್ ಫಾರಂಗಾಗಿ ಮನವಿ ಸಲ್ಲಿಸುವಾಗ ಟೆಂಡರ್ ಫಾರಂ ಬೆಲೆ ಹಣವನ್ನು ಡಿ.ಡಿ ಅಥವಾ ಕಛೇರಿಯಲ್ಲಿ ನಗದುಪಾವತಿಸಿದ ರಸೀದಿ ಹಾಗೂ ಇ.ಎಂ.ಡಿ. ಹಣವನ್ನು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಡಿ.ಡಿ ಅಥವಾ ಎಫ್.ಡಿ.ಆರ್ ಮೂಲಕ ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ ರವರ ಹೆಸರಿನಲ್ಲಿ ಸಲ್ಲಿಸತಕ್ಕದ್ದು.

2. ಕಾಮಗಾರಿಗಳ ಗುಣಮಟ್ಟ ಕಾಪಾಡುವ ಹಿತದೃಷ್ಟಿಯಿಂದ ಕಾಮಗಾರಿಯ ಅಂದಾಜು ಮೊತ್ತಕ್ಕಿಂತ ಕಡಿಮೆ ದರ ನಮೂದಿಸಿದಲ್ಲಿ ಅಂದಾಜಿನ ವ್ಯತ್ಯಾಸದ ಮೊತ್ತದ ಹಣವನ್ನು ಡಿ.ಡಿ. ರೂಪದಲ್ಲಿ ಟೆಂಡರ್ ಜೊತೆ ಲಗತ್ತಿಸಿ ಸಲ್ಲಿಸಬೇಕು, ತಪ್ಪಿದಲ್ಲಿ ಟೆಂಡರ್ ತಿರಸ್ಕರಿಸಲಾಗುವುದು.

3. ಕಾಮಗಾರಿಗಳು ಗುತ್ತಿಗೆದಾರರ ಟೆಂಡರ್ ದರಗಳು ಒಂದು ವರ್ಷ (ಟೆಂಡರ್ ಕರೆದ ದಿನಾಂಕದಿಂದ) ಅವಧಿಯ ಸಿಂದುತ್ವ ಹೊಂದಿರುತ್ತದೆ.

4. ಕಾಮಗಾರಿಗಳು ಪೂರ್ಣಗೊಂಡ ನಂತರ 3ನೇ ಪಾರ್ಟಿಯಿಂದ ಕಾಮಗಾರಿ ಗುಣಮಟ್ಟದ ಬಗ್ಗೆ ದೃಢೀಕರಣ ಪತ್ರವನ್ನು ಸಲ್ಲಿಸಿದ ನಂತರ ಅಂತಿಮ ಬಿಲ್ ಪಾವತಿಗೆ ಕ್ರಮ ಕೈಗೊಳ್ಳಲಾಗುವುದು.

5. ಎರಡು ವರ್ಷ ನಿರ್ವಹಣಾ ವೆಚ್ಚವನ್ನು ಗುತ್ತಿಗೆದಾರರೇ ಬರಿಸುವುದು.

6. ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಸಕ್ಷಮ ಪ್ರಾಧಿಕಾರ ಕಾಯ್ದಿರಿಸಿಕೊಂಡಿರುತ್ತದೆ.

7. ಟೆಂಡರ್ ನಿಬಂಧನೆಗಳು ಹಾಗೂ ಇತರೆ ಹೆಚ್ಚಿನ ಮಾಹಿತಿಗಳನ್ನು ಕಛೇರಿಯ ವೇಳೆಯಲ್ಲಿ ಮತ್ತು www.doddaballapurcity.gov.in ನಲ್ಲಿ ಪಡೆದು ತಿಳಿದುಕೊಳ್ಳುವುದು.

| | | | |
|---|---|---|---|
| ಸಹಿ/– | ಸಹಿ/– | ಸಹಿ/– | ಸಹಿ/– |
| (ಎನ್.ಮಲ್ಲಿಕಾರ್ಜುನ) | (ಜಿ.ಎಸ್.ಸೋಮರುದ್ರಶರ್ಮ) | (ಡಿ.ಎಂ.ಚಂದ್ರಶೇಖರ್) | (ಎಸ್.ಪ್ರಭುದೇವ್) |
| ಕೆ.ಎಂ.ಎ.ಎಸ್., | | | |
| ಅಧ್ಯಕ್ಷರು | ಉಪಾಧ್ಯಕ್ಷರು | ಸ್ಥಾಯಿ ಸಮಿತಿ ಅಧ್ಯಕ್ಷರು | ಪೌರಾಯುಕ್ತರು, |
| ನಗರಸಭೆ, ದೊಡ್ಡಬಳ್ಳಾಪುರ. | ನಗರಸಭೆ, ದೊಡ್ಡಬಳ್ಳಾಪುರ. | ನಗರಸಭೆ, ದೊಡ್ಡಬಳ್ಳಾಪುರ. | ನಗರಸಭೆ, ದೊಡ್ಡಬಳ್ಳಾಪುರ |

**"ನಕಲು"**

**ಪೌರಾಯುಕ್ತರು,**
**ನಗರಸಭೆ, ದೊಡ್ಡಬಳ್ಳಾಪುರ**